ಭಾಸವಾಗುತ್ತಿತ್ತು. ಅವನು ಒಂದು ಪೆಗ್ ವೈನ್ ಮುಗಿಸುವಷ್ಟರಲ್ಲಿ ಏಳೆಂಟು ಡ್ಯಾನ್ಸ್ ಹುಡುಗಿಯರು ಸ್ಟೇಜ್ ಮೇಲೆ ಬಂದು ಗ್ರಾಹಕರ ಕಡೆ ನಗುತ್ತಾ ಕೈ ಬೀಸಿದ್ದರು. ಬದಲಾಗಿ ಗ್ರಾಹಕರು ಗದ್ದಲ ಮಾಡುತ್ತಾ ಪ್ರತಿಕ್ರಿಯೆ ತೋರಿದ್ದರು. ಮೊದಲು ಗ್ರೂಪ್ ಡ್ಯಾನ್ಸ್ ಪ್ರಾರಂಭವಾಯಿತು. ಹಳೆಯ ಹಿಂದಿ ಹಾಡುಗಳಿಗೆ ನರ್ತಕಿಯರು ಮೈಮರೆತು ಮಾದಕ ಹೆಜ್ಜೆಗಳನ್ನು ಹಾಕುತ್ತಿದ್ದರು. ಎಲ್ಲಾ ನರ್ತಕಿಯರೂ ಮೂವತ್ತು ವರ್ಷದೊಳಗಿನವರಂತೆ ಕಾಣುತ್ತಿದ್ದರು. ಕೆಲವರು ಸ್ಟೇಜ್ ಬಳಿ ಹೋಗಿ ನರ್ತಕಿಯರ ಮೇಲೆ ನೋಟುಗಳನ್ನು ಎಸೆಯುತ್ತಿದ್ದರು. ಕೆಲವರು ನರ್ತಕಿಯರ ಕೈಕುಲುಕಲು, ಆಲಂಗಿಸಿಕೊಳ್ಳಲು ಹಾತೊರೆಯುತ್ತಾ ಸ್ಟೇಜಿನ ಬಳಿಯೇ ಸುಳಿದಾಡುತ್ತಿದ್ದರು. ಗ್ರೂಪ್ ಡ್ಯಾನ್ಸ್ ಮುಗಿದು ಸೋಲೊ ಡ್ಯಾನ್ಸ್ ಪ್ರಾರಂಭವಾಗಿತ್ತು. ಸುಮಾರು ಇಪ್ಪತ್ತೈದು ವರ್ಷ ವಯಸ್ಸಿನ ಯುವತಿ 'ಆದಾಹೇ ಚಂದ್ರಮ ರಾತ್ ಆದಿ' ಹಾಗೂ 'ಆಜಾರೇ ಓ ಮೇರೆ ದಿಲ್ಬರ್ ಆಜಾ' ಎಂಬ ಹಾಡುಗಳಿಗೆ ಮನೋಜ್ಞವಾಗಿ ನರ್ತಿಸಿದ್ದಳು. ಅವಳು ತನ್ನನ್ನೇ ಕರೆಯುತ್ತಿರುವಂತೆ ಅನ್ನಿಸಿತು ವೈಲ್ಡನಿಗೆ. ಪ್ರೇಕ್ಷಕರು ಕರತಾಡನ ಮಾಡಿದ್ದರು. ಅವಳು ಮತ್ತೆರಡು ಹಳೆಯ ಹಿಂದಿ ಗೀತೆಗಳಿಗೆ ಸೋಲೊ ಡ್ಯಾನ್ಸ್ ಮಾಡಿದ್ದಳು. ಆಸ್ಕರ್ ವೈಲ್ಡ್ ವೈನ್ ಕುಡಿಯುತ್ತಾ ಸಂಗೀತ ಲೋಕದಲ್ಲಿ ಮುಳುಗಿಬಿಟ್ಟಿದ್ದ. ಒಂಬತ್ತೂವರೆ ಗಂಟೆಗೆ ಸೋಲೊ ಡ್ಯಾನ್ಸರ್ ಹೊರಟು ಹೋಗಿದ್ದಳು.

ನಂತರ ಕೆಲವು ಡ್ಯಾನ್ಸರುಗಳು ಸ್ಟೇಜ್ ಮೇಲೆ ಅಬ್ಬರದ ಸಂಗೀತಕ್ಕೆ ಮಾದಕವಾಗಿ ಡ್ಯಾನ್ಸ್ ಮಾಡುತ್ತಿದ್ದರೆ, ಮತ್ತೆ ಕೆಲವು ಡ್ಯಾನ್ಸರುಗಳು ಗ್ರಾಹಕರ ಜೊತೆಯಲ್ಲಿ ಕುಳಿತು ಹರಟೆ ಹೊಡೆಯುವುದು, ಕುಡಿಯುವುದು ಮಾಡುತ್ತಿದ್ದರು. ಒಂದು ರೀತಿಯ ಮಾದಕ ಜಗತ್ತೇ ಅಲ್ಲಿ ಸೃಷ್ಟಿಯಾಗಿತ್ತು. ಆಸ್ಕರ್ ವೈಲ್ಡನಿಗೆ ಆ ವಾತಾವರಣ ತುಂಬಾನೇ ಮಜಾ ಅನ್ನಿಸಿತ್ತು. ಹತ್ತು ಗಂಟೆಗೆ ಡೋರ್ ನಂಬರ್ ಒನ್ ಡ್ಯಾನ್ಸ್ ಬಾರ್ ಬಿಟ್ಟು ಮನೆಗೆ ತೆರಳಿದ್ದ. ಮಾರನೆಯ ದಿನ ಸಂಜೆಗೂ ಮತ್ತೆ ಡೋರ್ ನಂಬರ್ ಒನ್ ಕಡೆ ಮನಸ್ಸು ಎಳೆದಿತ್ತು. ಹೊರಟೇಬಿಟ್ಟ. ಹಿಂದಿನ ರಾತ್ರಿಯ ಘಟನೆಗಳೇ ಅಂದೂ ಪುನರಾವರ್ತನೆಗೊಂಡಿದ್ದವು. ಹಾಗೆ ಒಂದು ವಾರ ರೆಗ್ಯುಲರ್ ಆಗಿ ಡೋರ್ ನಂಬರ್ ಒನ್‌ಗೆ ಹೋಗಿ ವೈನ್ ಕುಡಿಯುತ್ತಾ, ಡ್ಯಾನ್ಸ್ ನೋಡುತ್ತಾ ಮೈಮರೆತಿದ್ದ. ಅಲ್ಲಿ ಬಂದು ನೃತ್ಯ ಮಾಡುತ್ತಿದ್ದ ನರ್ತಕಿಯರ ಪೈಕಿ ಸೋಲೊ ಡ್ಯಾನ್ಸ್ ಮಾಡಿ ಒಂಬತ್ತೂವರೆಗೆ ಡ್ಯಾನ್ಸ್ ಬಾರ್ ತೊರೆದು ಹೋಗುತ್ತಿದ್ದ ಯುವತಿ ಆಸ್ಕರ್ ವೈಲ್ಡನ ಮನಸೆಳೆದಿದ್ದಳು. ಮೇಕಪ್ ಜಾಸ್ತಿ ಮಾಡದೆ ನೋಡಲು ಕೂಡ ಸುಂದರವಾಗಿದ್ದಳು. ಪ್ರತಿನಿತ್ಯ ಸುಮಾರು ಡ್ಯಾನ್ಸ್ ಹುಡುಗಿಯರು ಅವನ ಬಳಿ ಬಂದು ಕಂಪನಿ ಬೇಕಾ ಎಂದು ಕೇಳಿದಾಗ ಅವನು ತಲೆ ಅಲ್ಲಾಡಿಸಿ ನಿರುತ್ಸಾಹವನ್ನು ತೋರಿದ್ದ.

ಅಂದು ಭಾನುವಾರ ಅವನು ಮಾಮೂಲಿಯಾಗಿ ಡ್ಯಾನ್ಸ್ ಬಾರ್‌ಗೆ ಹೋದಾಗ ಸೋಲೊ ಡ್ಯಾನ್ಸ್ ಹುಡುಗಿಯನ್ನು ಮಾತನಾಡಿಸಬೇಕೆಂಬ ತೀವ್ರವಾದ ಹಂಬಲ ಹುಟ್ಟಿತ್ತು. ಮ್ಯಾನೇಜರರನ್ನು ಕರೆಸಿ ಆ ಯುವತಿಯೊಂದಿಗೆ ಒಂದೈದು ನಿಮಿಷ ಮಾತನಾಡಬೇಕೆಂದ. ಮ್ಯಾನೇಜರ್ ಆ ಹುಡುಗಿ ಮಾತ್ರ ಯಾರೊಂದಿಗೂ ಮಾತನಾಡಲು ಇಚ್ಛಿಸುವುದಿಲ್ಲವೆಂದೂ, ಪ್ರತಿನಿತ್ಯ ರಾತ್ರಿ ಒಂಬತ್ತೂವರೆಯ ಮೇಲೆ ಒಂದು ಕ್ಷಣವೂ ಇರುವುದಿಲ್ಲವೆಂದು ಹೇಳಿದ. ಆಗ ಆಸ್ಕರ್ ವೈಲ್ಡ್ ವಿಧಿಯಿಲ್ಲದೆ ತಾನು ಮ್ಯಾಥ್ಯೂ ಅಲೆಗ್ಸಾಂಡರನ ಕ್ಲಾಸ್‌ಮೇಟ್ ಎಂದು ಪರಿಚಯವನ್ನು ಹೇಳಿಕೊಂಡಿದ್ದ.

'ನಾನು ನಿಮ್ಮನ್ನು ವಾರದಿಂದಲೂ ಗಮನಿಸುತ್ತಿದ್ದೇನೆ. ನನಗೆ ಅಲೆಗ್ಸಾಂಡರ್ ಸರ್ ನಿಮ್ಮ ಬಗ್ಗೆ ಮೊದಲೇ ತಿಳಿಸಿದ್ದರು. ಆದರೆ ನೀವು ವಾರದಿಂದ ಪ್ರತಿನಿತ್ಯ ಇಲ್ಲಿಗೆ ಬರುತ್ತಿದ್ದರೂ ನಿಮ್ಮ ಪರಿಚಯವನ್ನು ಹೇಳಿಕೊಂಡಿಲ್ಲ. ಈ ವಿಷಯ ಗೊತ್ತಾದರೆ ಅಲೆಗ್ಸಾಂಡರ್ ಸರ್ ನನ್ನ ಮೇಲೆ ಬೇಸರ ಮಾಡಿಕೊಳ್ಳುತ್ತಾರೆ. ನೀವು ಬಯಸಿದಂತೆ ನಾಳೆ ಒಂದೈದು ನಿಮಿಷ ಆ ಸೋಲೊ ಡ್ಯಾನ್ಸರನ್ನು ನಿಮ್ಮೊಂದಿಗೆ ಭೇಟಿ ಮಾಡಿಸಲು ಪ್ರಯತ್ನಿಸುತ್ತೇನೆ ಸರ್' ಎಂದು ಮುತುವರ್ಜಿ ತೋರಿಸಿದ್ದ. ಮಾರನೆಯ ದಿನ ರಾತ್ರಿ ಏಳೂವರೆಗೆಲ್ಲಾ ಖುಷಿಯಿಂದ ಆಸ್ಕರ್ ವೈಲ್ಡ್ ಡ್ಯಾನ್ಸ್ ಬಾರ್ ಪ್ರವೇಶಿಸಿದಾಗ ಅವನಿಗಾಗಿಯೇ ಸ್ಪೆಷಲ್ ಟೇಬಲ್ಲನ್ನು ಕಾದಿರಿಸಲಾಗಿತ್ತು. ಒಂಬತ್ತು ಗಂಟೆಗೆ ಮ್ಯಾನೇಜರ್ ಬಂದು ಅವಳು ಒಂಬತ್ತೂವರೆಗೆ ಐದು ನಿಮಿಷ ಮಾತನಾಡಲು ಒಪ್ಪಿರುವುದಾಗಿ ತಿಳಿಸಿದ. ಒಂಬತ್ತೂವರೆಗೆ ಸರಿಯಾಗಿ ಅವಳು ವೈಲ್ಡನ ಟೇಬಲ್ಲಿನ ಎದುರು ಸೀಟಿನಲ್ಲಿ ಬಂದು ಕುಳಿತಿದ್ದಳು. ಮೇಕಪ್ ತೊಳೆದುಕೊಂಡಿದ್ದ ಅವಳೀಗ ಸರಳ ಸುಂದರಿಯಾಗಿದ್ದಳು. ವೈಲ್ಡ್ ತನ್ನ ಪರಿಚಯವನ್ನು ಸಂಕ್ಷಿಪ್ತವಾಗಿ ಹೇಳಿಕೊಂಡು–

'ನೀವು ಸೋಲೊ ಡ್ಯಾನ್ಸ್ ತುಂಬಾ ಚನ್ನಾಗಿ ಪರ್ಫಾರ್ಮ್ ಮಾಡುತ್ತೀರಿ. ನಿಮ್ಮನ್ನು ಮಾತನಾಡಬೇಕೆನಿಸಿತು, ಹಾಗಾಗಿ ಮ್ಯಾನೇಜರ್ ಬಳಿ ತಿಳಿಸಿದೆ' ಎಂದಿದ್ದ. ಅವಳ ಮುಖ ಈಗ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

'ಧನ್ಯವಾದಗಳು ನಿಮ್ಮ ಔದಾರ್ಯಕ್ಕೆ' ಸಣ್ಣದಾಗಿ ನಕ್ಕು ಹೇಳಿದ್ದಳು.

'ನಿಮ್ಮ ಹೆಸರೇನೆಂದು ಕೇಳಬಹುದೆ?' ಮುಜುಗರದಿಂದಲೇ ಕೇಳಿದ್ದ.

'ಈ ಡ್ಯಾನ್ಸ್ ಬಾರುಗಳಿಗೆ ಬರುವ ಹುಡುಗಿಯರು ಯಾರೂ ತಮ್ಮ ಒರಿಜಿನಲ್ ಹೆಸರನ್ನು ಇಲ್ಲಿ ರಿವೀಲ್ ಮಾಡುವುದಿಲ್ಲ. ಮೇನಕಾ, ಹೆಲೆನ್, ಮೀನಾಕುಮಾರಿ, ಕನ್ಯಾಕುಮಾರಿ, ಮಧುಬಾಲ, ಊರ್ವಶಿ, ಐಶ್ವರ್ಯ ಮುಂತಾಗಿ ಹೇಳುತ್ತಾರೆ ಇಲ್ಲಿ. ಹಾಗೆ ನನ್ನದೂ ಇಲ್ಲಿ ಜೂಹಿ ಚಾವ್ಲ. ನನ್ನ ನಿಜವಾದ ಹೆಸರು ಬೃಂದಾ ರಾಠೋಡ್'.

ಅವಳು ನಿಜ ಹೇಳುತ್ತಿದ್ದಾಳೆನಿಸಿತ್ತು ಅವನಿಗೆ. ಧ್ವನಿ ಮಧುರವಾಗಿದೆಯೆನಿಸಿ ಅವಳು ಆಪ್ಯಾಯಮಾನವೆನಿಸಿದಳು.

'ಏನು ಮಾಡುತ್ತಿರುವಿರಿ?' ಮತ್ತೆ ಕೇಳಿದ್ದ.

'ನೋಡಿದಿರಲ್ಲ, ಡ್ಯಾನ್ಸ್ ಮಾಡುತ್ತೇವೆ. ಐದು ನಿಮಿಷ ಮುಗಿಯಿತು, ನಾನು ಹೊರಡಬೇಕು' ಅವಳು ಮಾತಿನಲ್ಲಿ ಅವಸರ ತೋರಿದ್ದಳು.

'ಏನಷ್ಟು ಅವಸರ?' ಪ್ರಶ್ನಿಸಿದ್ದ.

'ಹತ್ತು ಗಂಟೆಗೆ ನಾನು ಲೀಲಾವತಿ ಆಸ್ಪತ್ರೆಗೆ ಹೋಗಬೇಕು'.

'ಯಾರಿದ್ದಾರೆ ಅಲ್ಲಿ?'

'ಅಪ್ಪ ಇದ್ದಾನೆ. ರಾತ್ರಿ ಅವನಿಗಾಗಿ ಅಟೆಂಡರ್ಸ್ ಲಾಂಜ್‌ನಲ್ಲಿ ಕಾಲ ಕಳೆಯಬೇಕು.'

'ನಿಜ ಹೇಳಿ, ನೀವು ಏನು ಮಾಡುತ್ತಿರುವಿರಿ?'

'ನಾನು ಟೀಚರ್, ಅಂದರೆ ಅರ್ಥಶಾಸ್ತ್ರದ ಉಪನ್ಯಾಸಕಿ. ಚರ್ಚ್ ಗೇಟಿನ ಜೈಹಿಂದ್ ಕಾಲೇಜಿನಲ್ಲಿ. ಇನ್ನೂ ಮಾತನಾಡಬೇಕೆನಿಸಿದರೆ ನಾಳೆ ಹನ್ನೆರಡೂಕಾಲು ಸಮಯಕ್ಕೆ ಚರ್ಚ್ ಗೇಟ್ ಬಳಿಯ ಸಾಮ್ರಾಟ್ ಹೋಟೆಲಿಗೆ ಬನ್ನಿ. ಚಹಾ ಕುಡಿಯಲೆಂದು ನಾನಲ್ಲಿಗೆ ಬರುತ್ತೇನೆ...' ಎಂದು ಹೇಳಿ ಅವನ ಉತ್ತರಕ್ಕೂ ಕಾಯದೆ ಹೊರಟು ಹೋಗಿದ್ದಳು. ಆಸ್ಕರ್ ವೈಲ್ಡನಿಗೆ ಅವಳ ಬಗ್ಗೆ ಮತ್ತಷ್ಟು ಕುತೂಹಲ ಮೂಡಿತ್ತು.

ಮಾರನೆಯ ದಿನ ಮಧ್ಯಾಹ್ನ ಹನ್ನೆರಡು ಗಂಟೆ ಹತ್ತು ನಿಮಿಷಕ್ಕೆ ಸರಿಯಾಗಿ ಅವನು ಹೋಟೆಲ್ ಸಾಮ್ರಾಟನ್ನು ಪ್ರವೇಶಿಸಿದ್ದ. ವೆಜಿಟೇರಿಯನ್ ಹೋಟೆಲ್ ತುಂಬಾನೇ ವಿಶಾಲವಾಗಿದ್ದು ಅಷ್ಟೊಂದು ಗಜಿಬಿಜಿಯೇನೂ ಇರಲಿಲ್ಲ. ಮಧ್ಯಾಹ್ನದ ಊಟಕ್ಕೆ ಜನ ಬರಲು ಇನ್ನೂ ಒಂದು ಗಂಟೆ ಉಳಿದಿತ್ತು. ಎರಡು ಸೀಟರ್ ಟೇಬಲ್ಲೊಂದನ್ನು ಹಿಡಿದು ಕುಳಿತ ವೈಲ್ಡ್. ಸಪ್ಲೈರ್ ಬಂದು ಏನು ಬೇಕೆಂದು ವಿಚಾರಿಸುವುದಕ್ಕೂ ಬೃಂದಾ ರಾಠೋಡ್ ಹೋಟೆಲ್ ಪ್ರವೇಶಿಸುವುದಕ್ಕೂ ಒಂದೇ ಆಗಿತ್ತು. ಸೀರೆಯುನ್ನುಟ್ಟಿದ್ದ ಬೃಂದಾ ರಾತ್ರಿ ಡ್ಯಾನ್ಸ್ ಬಾರ್‌ನಲ್ಲಿ ಕಂಡಿದ್ದಕ್ಕಿಂತಲೂ ನೂರು ಪಾಲು ಸುಂದರವಾಗಿ ಕಂಡಿದ್ದಳು ಅವನಿಗೆ. ಅಂಜಲಿ ದೇಸಾಯಿ, ಸಾಯಿಪ್ರಭೆ, ಪೂರ್ವಿಕಾ ದೇಶಪಾಂಡೆ, ಪ್ರಿಯಾಂಕಾ ಅಗರ್ವಾಲ್, ಮೈಥಿಲಿ ಈ ಎಲ್ಲರಿಗಿಂತಲೂ ಆಕರ್ಷಕವಾಗಿ ಕಾಣುತ್ತಿದ್ದಳು. ಜೊತೆಗೆ ಮಾಗಿದ ಮುಗ್ಧತೆ ಕೂಡ ಮುಖದಲ್ಲಿ ಮಡುಗಟ್ಟಿತ್ತು. ಸಪ್ಲೈರ್‌ಗೆ ಎರಡು ಪಾವ್ ಬಾಜಿ ಜೊತೆಗೆ ಎರಡು ಸ್ಪೆಷಲ್ ಚಹಾ ಹೇಳಿದ್ದ. ಅವಳು ಹೋಟೆಲ್‌ಗೆ ಬರುವುದರ ಬಗ್ಗೆ ಅವನಿಗೆ ಅನುಮಾನವೇ ಇತ್ತು. ಅವಳನ್ನು ಕಂಡು ಕೈಬೀಸಿದವನಿಗೆ ಅವಳಲ್ಲಿ ನಂಬಿಕೆ ಹುಟ್ಟಿತ್ತು. ಅವಳು ನಸುನಗುತ್ತಾ ಅವನ ಎದುರು ಚೇರ್ ಮೇಲೆ ಕುಳಿತುಕೊಳ್ಳುತ್ತಾ–

'ಹನ್ನೆರಡು ಗಂಟೆಗೆ ಒಂದು ಪೀರಿಯೆಡ್ ಮುಗಿಯುತ್ತದೆ. ಇಲ್ಲಿ ಒಂದು ಚಹಾ ಕುಡಿದರೆ ಕಾಲೇಜು ಮುಗಿಯುವವರೆಗೂ ಚೈತನ್ಯ' ಎಂದು ನಗುತ್ತಾ ಮಾತು ತೆಗೆದಿದ್ದಳು.

'ನೀವು ಬರುವುದರ ಬಗ್ಗೆ ನನಗೆ ಅನುಮಾನವಿತ್ತು' ಮನಸ್ಸಲ್ಲಿದ್ದುದ್ದನ್ನು ಹೇಳಿಯೇ ಬಿಟ್ಟ.

'ನಿಮಗೆ ಕಾರ್ಲ್ ಮಾರ್ಕ್ಸ್ ಗೊತ್ತಾ?' ಏಕಾಏಕಿ ಪ್ರಶ್ನಿಸಿದ್ದಳು.

'ಲಿಟರೇಚರ್ ಎಂಎ ಮಾಡಿದ್ದೀನಿ. ಕಾರ್ಲ್